**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 971/2025**

**ಪಿ.ಡಬ್ಲ್ಯೂಃ 1**

**ಸಾಕ್ಷಿಗೆ ದಿನಾಂಕಃ 09.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

## ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಕೆ ಜೆ ವಕೀಲರಿಂದ

1. ನನಗೆ ಕನ್ನಡ ಓದಲು ಬರುತ್ತದೆ. ಕನ್ನಡ ಬರೆಯಲು ಬರುವುದಿಲ್ಲ. ನನಗೆ ಇಂಗ್ಲಿಷ ಓದಲು ಬರೆಯಲು ಬರುವುದಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನಾನು ನನ್ನ ಸ್ವಂತ ಜಮೀನಿನಲ್ಲಿ ಹಾಗೂ ಬೇರೆಯವರ ಜಮೀನಿನಲ್ಲಿ ಸಹ ವ್ಯವಸಾಯ ಮಾಡುತ್ತೇನೆ. ದೂರಿನಲ್ಲಿ ಏನು ಬರೆದಿದೆ ಗೊತ್ತಿಲ್ಲ. ಕಾರಣ ಅದು ಇಂಗ್ಲೀಷ ನಲ್ಲಿ ಇರುತ್ತದೆ. ದೂರಿನಲ್ಲಿ ಏನು ಬರೆಯಲಾಗಿದೆ ಎಂದು ನಮ್ಮ ವಕೀಲರು ನನಗೆ ಹೇಳಿದ್ದಾರೆ. ಆರೋಪಿ ನನಗೆ 10-12 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿಯ ಗಂಡನ ತಂಗಿಯನ್ನು ನನ್ನ ಅಳಿಯನಾದ ಹನುಮೇಶರವರಿಗೆ ಮದುವೆ ಮಾಡಿರುತ್ತೇವೆ. ಸದರಿ ಹನುಮೇಶ ನನ್ನ ಹೆಂಡತಿಯ ಸಂಬಂಧ ಕಡೆಯಿಂದ ಅಳಿಯನಾಗಬೇಕು. ವ್ಯವಸಾಯ ನನ್ನ ಆದಾಯದ ಮೂಲ ಆಗಿರುತ್ತದೆ. ಸಾಕ್ಷಿ ಮುಂದುವರೆದು " ನನ್ನ ಬಳಿ ಎರಡು ಟ್ರ್ಯಾಕ್ಟರ್ ಇದ್ದು ಅವುಗಳನ್ನು ನಾನು ಕಾಂಟ್ರಕ್ಟ್ ಕೆಲಸ ಮಾಡಲು ಬೆಂಗಳೂರಿಗೆ ಕಳುಹಿಸಿರುತ್ತೇನೆ ಅದರಿಂದ ಸಹ ಪ್ರತಿ ಟ್ರಾಕ್ಟರ್ ನಿಂದ ತಿಂಗಳಿಗೆ 30 ಸಾವಿರ ರೂಪಾಯಿ ಆದಾಯ ಬರುತ್ತದೆ " ಎಂದು ನುಡಿಯುತ್ತಾರೆ.

2. ನನ್ನದು ಒಟ್ಟು 12 ಎಕರೆ ಜಮೀನು ಇರುತ್ತದೆ. ಸದರಿ ಜಮೀನು ನನ್ನ ತಾಯಿ, ಹೆಂಡತಿ ಹಾಗೂ ನನ್ನ ಹೆಸರಿಗೆ ಇರುತ್ತವೆ. ನಾನು ಪ್ರತಿ ಎಕರೆಗೆ ವರ್ಷಕ್ಕೆ 50 ಸಾವಿರ ಲಾಭ ಗಳಿಸುತ್ತೇನೆ. ನನ್ನ 12 ಎಕರೆ ಜಮೀನಿನ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ,

ನನ್ನ ಹೆಸರಿಗೆ ಇರುವ ಟ್ರಾಕ್ಟರ್ ಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಟ್ರಾಕ್ಟರ್ ಗಳಿಂದ ತಿಂಗಳಿಗೆ 30 ಸಾವಿರ ಆದಾಯ ಬರುವ ಬಗ್ಗೆ ಬ್ಯಾಂಕ್ ವಿವರ ನಾನು ಹಾಜರುಪಡಿಸಿಲ್ಲ. ದೂರಿನಲ್ಲಿ ನನ್ನ ಹೆಸರಿಗೆ ಟ್ರಾಕ್ಟರ್ ಹಾಗೂ ಜಮೀನು ಇರುವ ಬಗ್ಗೆ ಬರೆಯಿಸಿಲ್ಲ. ನನಗೆ ಎಷ್ಟು ಆದಾಯ ಇದೆ ಎಂದು ದೂರಿನಲ್ಲಿ ಬರೆಯಿಸಿಲ್ಲ.

3. ಆರೋಪಿಗೆ ನಾನು ನಗದು ರೂಪದಲ್ಲಿ ಹಣ ನೀಡಿದ್ದೇನೆ. ಸದರಿ ಹಣ ಬೆಳೆ ಮಾರಿದ ಬಳಿಕ ನನ್ನ ಬಳಿ ಇತ್ತು. ನಾನು ಜಮೀನಿನ ಉತ್ಪನ್ನ ಮಾರಾಟ ಮಾಡಿದ ನಂತರ ಖರೀದಿದಾರರಿಂದ ಹಣವನ್ನು ನಗದು ರೂಪದಲ್ಲಿಯೇ ಪಡೆದಿದ್ದೇನೆ. ಖರೀದಿದಾರರು ನೀಡಿದ ಬಿಲ್ಲುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಖರೀದಿದಾರರಾ ವಿವರನ್ನು ನಾನು ದೂರಿನಲ್ಲಿ ಬರೆಯಿಸಿಲ್ಲ. ಖರೀದಿದಾರರ ಹೆಸರು ಎನ್ ಜಿ ಪಂಪಣ್ಣ ಆಗಿರುತ್ತದೆ. ನನ್ನ ಟ್ರ್ಯಾಕ್ರರನ್ನು ನಾನು ಲ್ಯಾಂಡ್ ಅರ್ಮಿ ಕಂಪನಿಯ ಬಳಿ ಬಿಟ್ಟಿರುತ್ತೇನೆ. ಆ ಬಗ್ಗೆ ಯಾವುದೇ ಕರಾರು ಪತ್ರ ಇರುವುದಿಲ್ಲ. ಅವರಿಂದ ನಾನು ಹಣವನ್ನು ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಸಿಕೊಳ್ಳುವುದಿಲ್ಲ. ನಗದು ರೂಪದಲ್ಲಿಯೇ ಪಡೆದುಕೊಳ್ಳುತ್ತೇನೆ.

4. ಈ ಪ್ರಕರಣದಲ್ಲಿನ ಪ್ರಶ್ನಿತ ವ್ಯವಹಾರ ಹೊರತುಪಡಿಸಿ ಆರೋಪಿ ಜೊತೆ ನಾನು ಈ ಮೊದಲು ಯಾವುದೇ ವ್ಯವಹಾರ ಮಾಡಿರಲಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ಹಣದ ಕೇಳಲು ಆರೋಪಿ ಮಾತ್ರ ಬಂದಿದ್ದರು. ಹಣವನ್ನು ಪಡೆಯುವಾಗ ಆರೋಪಿ ಜೊತೆ ಮಾರೇಶ ಮತ್ತು ರಾಜಶೇಖರ ಬಂದಿದ್ದರು. ಆ ರೀತಿ ದೂರಿನಲ್ಲಿ ಬರೆಯಿಸಿದ್ದೇನೆ. ಆರೋಪಿ ಕೇಳಲು ದಿಃ 17.01.2025 ರಂದು ಬಂದಿದ್ದರು. ದಿಃ 18.01.2025 ರಂದು ಹಣವನ್ನು ಪಡೆದಿರುತ್ತಾರೆ. ಆರೋಪಿ ತಾನು ಜಮೀನು ಖರೀದಿ ಮಾಡುವುದು ಇದೆ ಆ ಕಾರಣಕ್ಕೆ ಹಣ ಬೇಕು ಎಂದು ಕೇಳಿದ್ದರು. ಆ ರೀತಿ ನಾನು ದೂರಿನಲ್ಲಿ ಬರೆಯಿಸಿಲ್ಲ.

5. ಆರೋಪಿ ಹಾಗೂ ನನ್ನ ನಡುವಿನ ಹಣದ ವ್ಯವಹಾರ ನಾಗಲಾಪುರದ ನಮ್ಮ ಮನೆ ಒಳಗೆ ನಡೆಯಿತು. ಹಣವನ್ನು ನಾನು ಎಲ್ಲಿ ಯಾವ ರೀತಿ ಕೊಟ್ಟೆ ಎಂದು ದೂರಿನಲ್ಲಿ ಬರೆಯಿಸಿಲ್ಲ ಎಂದರೆ ಸರಿ. ಆರೋಪಿಗೆ ನಾನು ಬ್ಯಾಂಕ್ ಮೂಲಕ ವರ್ಗಾವಣೆ ಮಾಡಲಿಲ್ಲ. ಆರೋಪಗೆ ಹಣವನ್ನು 500 ರೂಪಾಯಿ ಮುಖಬೆಲೆಯ ನಗದು ರೂಪದಲ್ಲಿ ಕೊಟ್ಟಿದ್ದೆನೆ. ಭತ್ತ ಬೆಳೆದ ಹಣವನ್ನು ಆರೋಪಿಗೆ ನೀಡಿದ್ದೆನೆ ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ಹಣದ ಮೂಲದ ಬಗ್ಗೆ ನಾನು ದೂರಿನಲ್ಲಿ ಬರೆಯಿಸಿಲ್ಲ ಎಂದರೆ ಸರಿ. ಆರೋಪಿಗೆ ಹಣ ನೀಡಿದ್ದಕ್ಕೆ ಭದ್ರತೆಗಾಗಿ ನಾನು ಯಾವುದೇ ಪತ್ರ ಬರೆಯಿಸಿಕೊಂಡಿರುವುದಿಲ್ಲ.

6. ನಿಪಿಃ 1 ರಲ್ಲಿನ ಕೈಬರಹ ಹಾಗೂ ಚೆಕ್ಕನ್ನು ಬ್ಯಾಂಕ್ ಗೆ ಹಾಜರುಪಡಿಸಿವಾಗ ಬರೆದ ಪೇ ಇನ್ ಸ್ಲೀಪ್ ನಲ್ಲಿ ಇರುವ ಕೈ ಬರಹ ಒಂದೇ ಆಗಿರುತ್ತದೆ. ನಿಪಿಃ 1 ರಲ್ಲಿನ ಕೈ ಬರಹ ಆರೋಪಿಯದ್ದಾಗಿರುತ್ತದೆ. ಆರೋಪಿ ಅದನ್ನು ನನ್ನ ಸಮಕ್ಷಮ ಬರೆದಿರುತ್ತಾರೆ. ಪೇ ಇನ್ ಸ್ಲೀಪ್ ನಲ್ಲಿ ಇರುವ ಕೈ ಬರಹ ಯಾರದ್ದು ಎಂದು ಗೊತ್ತಿಲ್ಲ. ಆರೋಪಿಯು ಚೆಕ್ಕನ್ನು ದಿಃ 17.04.2025 ರಂದು ನೀಡಿದರು. ಆ ಸಮಯದಲ್ಲಿ ನಾನು ಹಾಗೂ ಆರೋಪಿ ಇಬ್ಬರೇ ಇದ್ದೆವು. ಈ ಪ್ರಶ್ನಿತ ವ್ಯವಹಾರದ ಬಗ್ಗೆ ಆರೋಪಿಯ ಕುಟುಂಬದ ಸದಸ್ಯರಾದ ಹನುಮೇಶರವರಿಗೆ ತಿಳಿಸಿದ್ದೆ. ಹನುಮೇಶ ಸಿರುಗುಪ್ಪದ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಕೆಲಸ ಮಾಡುತ್ತಾನೆ. ಅವರ ಹುದ್ದೆ ಏನು ಎಂದು ಗೊತ್ತಿಲ್ಲ. ಆರೋಪಿಯು ಚೆಕ್ಕನ್ನು ನಮ್ಮ ಊರಿಗೆ ಬಂದು ಕೊಟ್ಟಿರುತ್ತಾರೆ. ಹಣ ನೀಡುವಾಗ ಆರೋಪಿಗೆ ತನ್ನ ಗಂಡ ಅಥವಾ ರಕ್ತ ಸಂಬಂಧಿಕರನ್ನು ಕರೆದುಕೊಂಡು ಬರಲು ನಾನು ಹೇಳಲಿಲ್ಲ. ಆರೋಪಿ ನನಗೆ ಮೊದಲೇ ಗೊತ್ತಿದ್ದರಿಂದ ನಾನು ಆರೋಪಿಯ ಗಂಡ ಅಥವಾ ರಕ್ತ ಸಂಬಂಧಿಕರಿಗೆ ವಿಷಯವನ್ನು ತಿಳಿಸಲಿಲ್ಲ.

7. ನನಗೆ ಹಾಗೂ ಆರೋಪಿಗೆ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಯಾರದ್ದೋ ಚೆಕ್ಕನ್ನು ಪಡೆದು ದುರುಪಯೋಗ ಪಡಿಸಿಕೊಂಡಿದ್ದೆನೆ ಎಂದರೆ ಸರಿಯಲ್ಲ, ಆರೋಪಿಯ ವಿರುದ್ದ

ದುರುದ್ದೇಶದಿಂದ ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಹಾಗೂ ನನ್ನ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡಬೇಕಾದ ಬಾದ್ಯಸ್ತಿಕೆ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ದಿಃ 29.04.2025 ರಂದು ನೋಟಿಸ್ ಕಳುಹಿಸಿದ್ದೇನೆ. ಆರೋಪಿಗೆ ಕಳುಹಿಸಿದ ನೋಟಿಸ್ ಯಾವಾಗ ಹಿಂತಿರುಗಿ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ದಿಃ 13.05.2025 ರಂದು ಸದರಿ ನೋಟಿಸ್ ಹಿಂತಿರುಗಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿಯ ವಿಳಾಸವನ್ನು ಸರಿಯಾಗಿ ನೀಡಿದೆ ಇದ್ದ ಕಾರಣ ನಿಪಿಃ 6 ರಂತೆ ನೋಟಿಸ್ ಹಿಂತಿರುಗಿ ಬಂದಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುರೆದು ಆರೋಪಿಯೇ ತನಗೆ ಸದರಿ ವಿಳಾಸ ನೀಡಿದ್ದರು ಎಂದು ನುಡಿಯುತ್ತಾರೆ. ಆರೋಪಿಗೆ ನಾನು ಪೋಸ್ಟ ಮೂಲಕ ನೋಟಿಸ್ ಕಳುಹಿಸಿದ್ದೆ. ಯಾವ ದಿನ ಕಳುಹಿಸಿದ್ದೆ ಎಂದು ಗೊತ್ತಿಲ್ಲ. ದಿಃ 29.04.2025 ರಂದು ನಮ್ಮ ವಕೀಲರು ನೋಟಿಸ್ ನ್ನು ಪೋಸ್ಟ ಮೂಲಕ ಕಳುಹಿಸಿದ್ದರು. ಕಾಲವಿಳಂಬ ಮಾಡಿ ಈ ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅಂಚೆ ಇಲಾಖೆಯವರೊಂದಿಗೆ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು, ಹನುಮೇಶ ಸೇರಿ ಆರೋಪಿಯ ವಿರುದ್ದ ಸುಳ್ಳು ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಿಕ್ಕಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**

**ನ್ಯಾಯಾಧೀಶರು, ಸಿರುಗುಪ್ಪ .**